ಶ್ರೀ ನಜೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):-

1. ಹೌದು.

2. ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನಗಳ ಅಭಿವೃದ್ಧಿಗೆ ಬಿಡುಗಡೆಯಾದ ಹಣ

312 (532) ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವದ್ಧಿಗಾಗಿ ವಿವಿದ ಯೋಜನೆಗಳ ಅಡಿಯಲ್ಲಿ ಎಷ್ಟೆಷ್ಟು ಹಣವನ್ನು ಈ ವರ್ಷದಲ್ಲಿ ಬಿಡುಗಡೆ ಮಾಡಲಾಗಿದೆ?

ಆ) ವಿವಿಧ ಯೋಜನೆಗಳ ಮುಖಾಂತರ ಎಷ್ಟು ಜನರಿಗೆ ಈ ಸವಲತ್ತು ದೊರಕಿದೆ?

ಇ) ಕಳೆದ ವರ್ಷ ಎಷ್ಟು ಹಣ ಮೇಲ್ಕಂಡ ಯೋಜನೆಗಳಿಂದ ಖರ್ಚಾಗದೇ ಉಳಿದಿದೆ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):-

ಅ)

		ಲಕ್ಷ ರೂ.ಗಳಲ್ಲಿ
1)	ಇಲಾಖಾ ಕಾರ್ಯಕ್ರಮಗಳು (ಯೋಜನೆ ಮತ್ತು ಯೋಜನೇತರ)	2,348.00
2)	ವಿಶೇಷ ಘಟಕ ಯೋಜನೆ	5,702.29
3)	ಗಿರಿಜನ ಉಪ ಯೋಜನೆ	1,831.56

ಆ)

		ಫಲಾನುಭವಿಗಳು
1)	ಇಲಾಖಾ ಕಾರ್ಯಕ್ರಮಗಳು (ಯೋಜನೆ ಮತ್ತು ಯೋಜನೇತರ)	3,48,954
2)	ವಿಶೇಷ ಘಟಕ ಯೋಜನೆ.	1,21,355
3)	ಗಿರಿಜನ ಉಪ ಯೋಜನೆ.	5,209
	ಒಟ್ಟು	4,75,518

ಇ) ಇಲಾಖಾ ಕಾರ್ಯಕ್ರಮದಲ್ಲಿ 393.59 ಲಕ್ಷ ರೂ. ಗಳು ಖರ್ಚಾಗದೆ ಉಳಿದಿದೆ.

ವಿಶೇಷ ಘಟಕ ಯೋಜನೆಯ ರಾಜ್ಯ ಯೋಜನೆಯ ಡಿಯಲ್ಲಿ 8,914,29 ಲಕ್ಷ ರೂ.ಗಳನ್ನು ಒದಗಿಸುವ ಅಂದಾಜಿನಲ್ಲಿ 8,752,17 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದು, ಉಳಿದ 162.10 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಗಿರಿಜನ ಉಪ ಯೋಜನೆಯಡಿಯಲ್ಲಿ ಒಟ್ಟು 1258.36 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದ್ದು ಇದರಲ್ಲಿ ಬಾಕಿ ಹಣ ಯಾವುದೂ ಉಳಿದಿರುವುದಿಲ್ಲ.

ರಾಜ್ಯದ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳು

313 (535) ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದ ಆಸ್ಪತ್ರೆಗಳಲ್ಲಿ ಹುದ್ದೆಗಳು ಎಷ್ಟು ಖಾಲಿ ಇವೆ? ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಆ) ಸಮವಸ್ತ್ರ ಭತ್ಯೆ ಏರಿಕೆ ಬಗ್ಗೆ ಸರ್ಕಾರದ ಕ್ರಮವೇನು?